**KARNATAKA NURSING & PARAMEDICAL SCIENCES EDUCATION (REGULATION) AUTHORITY**
**Karnataka State Diploma In Nursing Examination Board**
First Floor, Library Block, BMC&RI Campus, K.R.Road, Bengaluru-560002
**Ph No**: 080-26700074, 26700075 **Email**: ksdneb@gmail.com

ಕ.ರಾ.ಶು.ಪ.ಮಂ/ಸಿಬ್ಬಂದಿ/ 14 / 2022-2023 ದಿನಾಂಕ: 23-11-2022

# ಸುತ್ತೋಲೆ

ವಿಷಯ: 2ನೇ ಸುತ್ತಿನ ಕೌನ್ಸಿಲಿಂಗ್‌ನಲ್ಲಿ ಆಯ್ಕೆಗೊಂಡು ಶುಶ್ರೂಷಾ ಶಾಲೆಗಳಿಗೆ ನೋಂದಣಿಯಾಗಿರುವ ವಿದ್ಯಾರ್ಥಿಗಳ ಮಾಹಿತಿಯನ್ನು ಮೈಗ್ರೇಟ್ ಮಾಡುವ ಬಗ್ಗೆ.

*****

2022-23ನೇ ಶೈಕ್ಷಣಿಕ ಸಾಲಿನ ಸರ್ಕಾರಿ ಕೋಟಾದ ಸೀಟುಗಳಿಗೆ 2ನೇ ಸುತ್ತಿನ ಕೌನ್ಸಿಲಿಂಗ್ ಪ್ರಕ್ರಿಯೆಯು ಪೂರ್ಣಗೊಂಡಿದ್ದು ಸರ್ಕಾರಿ ಕೋಟಾದಲ್ಲಿ ಸೀಟುಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ಶುಶ್ರೂಷಾ ಶಾಲೆಗಳಿಗೆ ದಾಖಲಾಗಲು ದಿನಾಂಕ: 16.11.2022 ರ ಸಂಜೆ 4:00 ರವರೆಗೆ ಕಾಲವಾಕಾಶ ನೀಡಲಾಗಿತ್ತು. ತಮ್ಮ ಶುಶ್ರೂಷಾ ಶಾಲೆಗಳಿಗೆ ಆಯ್ಕೆಯಾಗಿರುವ ವಿದ್ಯಾರ್ಥಿಗಳ ಮಾಹಿತಿಯು ಮಂಡಳಿಯ ಸಾಫ್ಟ್‌ವೇರ್‌ನಲ್ಲಿ ಲಭ್ಯವಿದ್ದು ದಾಖಲಾಗಲು ಬರುವ ವಿದ್ಯಾರ್ಥಿಗಳ ಮೂಲ ದಾಖಲಾತಿಗಳನ್ನು ಮಂಡಳಿಯ ನಿಯಮಾನುಸಾರ ಪರಿಶೀಲಿಸಿ ಸರಿಯಿದ್ದಲ್ಲಿ ಮಾತ್ರ ನೊಂದಣಿಗೆ ಪರಿಗಣಿಸುವಂತೆ ಈ ಮೂಲಕ ಎಲ್ಲಾ ಶುಶ್ರೂಷಾ ಶಾಲೆಗಳ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

**ಮುಂದುವರೆದು, ದಿನಾಂಕ:16.11.2022 ರೊಳಗೆ ದಾಖಲಾಗುವ ವಿದ್ಯಾರ್ಥಿಗಳ ಮಾಹಿತಿಯನ್ನು ಮಂಡಳಿಯ ಸಾಫ್ಟ್‌ವೇರ್‌ನಲ್ಲಿ ದಿನಾಂಕ: 24.11.2022 ರೊಳಗೆ ಕಡ್ಡಾಯವಾಗಿ ಮೈಗ್ರೇಟ್ ಮಾಡಿಕೊಳ್ಳಬೇಕು ಹಾಗೂ ದಾಖಲಾಗದ ವಿದ್ಯಾರ್ಥಿಗಳ ಮಾಹಿತಿಯನ್ನು ಮಂಡಳಿಯ ಸಾಫ್ಟ್‌ವೇರ್‌ನಲ್ಲಿ Not Admitted ಎಂದು ನಮೂದಿಸಿ ದಾಖಲಾಗದ ವಿದ್ಯಾರ್ಥಿಗಳ ಮಾಹಿತಿಯನ್ನು ಮಂಡಳಿಯ ಇ-ಮೇಲ್ ksdneb@gmail.com ಮೂಲಕ ಸಲ್ಲಿಸಲು ಸೂಚಿಸಲಾಗಿದೆ.**

ದಿನಾಂಕ: 24.11.2022 ರೊಳಗೆ **Not Admitted** ಎಂದು ನಮೂದಿಸದ ವಿದ್ಯಾರ್ಥಿಗಳನ್ನು ಯಾವುದೇ ಕಾರಣಕ್ಕೂ ಮುಂದಿನ ಸುತ್ತಿನ ಕೌನ್ಸಿಲಿಂಗ್‌ನಲ್ಲಿ ಸೀಟುಗಳ ಆಯ್ಕೆಗೆ ಪರಿಗಣಿಸುವುದಿಲ್ಲ ಇದಕ್ಕೆ ಸಂಬಂದಪಟ್ಟ ಶುಶ್ರೂಷಾ ಶಾಲೆಗಳ ಪ್ರಾಂಶುಪಾಲರೇ ಜವಾಬ್ದಾರರಾಗಿರುತ್ತಾರೆ.

ವಿಶೇಷಾಧಿಕಾರಿಗಳು
ಕರ್ನಾಟಕ ಶುಶ್ರೂಷಾ ಅರೆವೈದ್ಯಕೀಯ
ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ
ಬೆಂಗಳೂರು.